ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ:27.03.15

ಈ ವಾರದ ಮುನ್ಸೂಚನೆ (28-03-15 to 01.04.15 ವರೆಗೆ)

ನಿಯತಾಂಕಗಳು	28.03.15	29.03.15	30.03.15	31.03.15	01.04.15
ಮಳೆ (ಮಿ ಮಿ)	0	0	2	2	3
ಗರಿಷ್ಠ ಉಷ್ಣಾಂಶ(ಡಿ.ಸೆ.)	34	34	34	34	33
ಕನಿಷ್ಠ ಉಷ್ಣಾಂಶ (ಡಿ.ಸೆ.)	19	19	20	21	22
ಮೋಡ (ಪ್ರಮಾಣ)	1	0	0	4	5
ಅರ್ದ್ರತೆ ೭.೨೦ ಬೆ (ಶೇ)	75	67	71	73	70
ಅರ್ದ್ರತೆ ೨.೨೦ ಮ (ಶೇ)	40	38	38	42	39
ಗಾಳಿಯ ವೇಗ (ಕಿ.ಮಿ/ಗಂಟೆಗೆ)	5	4	4	5	6
ಗಾಳಿಯ ದಿಕ್ಕು (ಡಿಗ್ರಿ)	140	170	190	190	160

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಬಹುತೇಕ ಬಿಸಿಲಿನ ವಾತಾವರಣವಿರಲಿದ್ದು, ಸಂಜೆ ಅಥವಾ ರಾತ್ರಿ ವೇಳೆ ಮೋಡ ಕವಿದ ವಾತಾವರಣ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶವು 33–34.0°C ಮತ್ತು ಕನಿಷ್ಠ 19-22°C ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 67-75% ಇದ್ದು, ಮಧ್ಯಾಹ್ನ 38-42% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 4-6 ಕಿ.ಮೀ.ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- ಈ ವಾರದಲ್ಲಿ ಮಳೆ ಬರುವ ಸಂಭವ ಇದೆ.
- ಮಳೆ ಬಂದಿರುವ ಕಡೆ ಭೂಮಿಯನ್ನು ಉಳುಮೆ ಮಾಡುವುದರಿಂದ ತೇವಾಂಶವನ್ನು ಹಿಡಿದಿಡಬಹುದು ಹಾಗೂ ಮುಂದೆ ಬೆಳೆಗೆ ಬರುವ ರೋಗ ಮತ್ತು ಕೀಟ ಬಾಧೆಯನ್ನು ಕಡಿಮೆ ಮಾಡಬಹುದು.
- ಬೇಸಿಗೆ ಮಳೆಯಲ್ಲಿ ಬಹುತೇಕ ಕಡೆ ಆಲಿ ಕಲ್ಲು ಬೀಳುವ ಸಂಭವವಿರುವುದರಿಂದ ದ್ರಾಕ್ಷಿ ಹಾಗೂ ಇನ್ನಿತರ ಬೆಳೆಗಳಿಗೆ ಸೂಕ್ತ ರಕ್ಷಣಾ ವ್ಯವಸ್ಥೆ ಕೈಗೊಳ್ಳಬೇಕು.

ಮಾರ್ಚ್ ತಿಂಗಳಲ್ಲಿ ಬೆಳೆಯಬಹುದಾದ ಬೆಳೆ ಹಾಗೂ ತಳಿಗಳು:

ಶಕ್ತಿಮಾನ್ ಜೋಳ: ಸಿ.ಎಸ್.ಹೆಚ್.–೫, ಸಿ.ಎಸ್.ಹೆಚ್.–೯, ಸಿ.ಎಸ್.ವಿ.–೪

ಶೇಂಗಾ: ಟಿ.ಎಂ.ವಿ–2, eÉ.J¯ï-24, ಜಿ.ಪಿ.ಬಿ.ಡಿ–೪, ಚಿಂತಾಮಣಿ–೨ (ಕೆ.ಸಿ.ಹೆಚ್–೨).

ರಾಗಿ: ಇಂಡಾಫ್ಲ್–೯

ಪಾಪ್‌ಕಾರ್ನ್: ಅಂಬರ್. **ಅಲಸಂದೆ**: ಸಿ–೧೫೨, **ಅವರೆ**–ಹೆಚ್.ಎ.–೩, ಹೆಚ್.ಎ.–೪

ಕೋಳಿ ಸಾಕಣೆ ಹಾಗೂ ರೇಷ್ಮೆ ಕೃಷಿ: ಬಿಸಿಲಿನಿಂದ ರಕ್ಷಿಸಲು ಸೂಕ್ತ ವ್ಯವಸ್ಥೆ ಕೊಡಬೇಕು

ಸಸ್ಯ ಸಂರಕ್ಷಣೆ:

ರಸ ಹೀರುವ ಕೀಟ ಕಂಡುಬಂದರೆ ಶೇ. ೫% ಬೇವಿನ ಬೀಜದ ಕಷಾಯ ಅಥವಾ ಬೇವಿನ ಎಣ್ಣೆ ಅಥವಾ ಇಮಿಡಾಕ್ಲೋಪ್ರಿಡ್ ಸಿಂಪಡಿಸಿ

ಮಾವಿನ ಬೆಳೆಯಲ್ಲಿ ಬೂದು ರೋಗ ಕಂಡುಬಂದರೆ, ಸಲ್ಫೆಕ್ಸ್ ಅಥವಾ ಮೈಕ್ಲೊಬ್ಯುಟನಾಲ್ ಅನ್ನು ಬಿಸಿಲು ಕಡಿಮೆ ಇರುವ ಸಮಯದಲ್ಲಿ ಸಿಂಪಡಣೆ ಮಾಡಬೇಕು.

ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು